CC No.:-437/2014

P.W.:-2

ಸಾಕ್ಷಿಗೆ ಈ ದಿನ ದಿಃ 25-08-2021 ರಂದು ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನನ್ನ ಊರು ಬಿಜಗುಪ್ಪಿ ಗ್ರಾಮ ರಾಮದುರ್ಗ ತಾಲೂಕು ಇರುತ್ತದೆ. ನಾನು 28 ವರ್ಷಗಳಿಂದ ಕೇಳಕರ ಪ್ರೌಢಶಾಲೆಯಲ್ಲಿ ಹಿಂದಿ ಶಿಕ್ಷಕನಾಗಿ ಕೆಲಸ ನಿರ್ವಹಿಸುತ್ತಿರುತ್ತೇನೆ. ನಾನು ಹಿಂದಿ ಶಿಕ್ಷಕನಾಗಿ ಹೊಸದಾಗಿ ಸೇರಿಕೊಂಡಾಗ ಮುಖ್ಯೋಪಾದ್ಯಾಯರಾಗಿ ಆರ್ ಬಿ ಕಂಚಿ ಇದ್ದರು ಅವರ ನಂತರ ಎಮ್ ಎಮ್ ಎಲಿಗಾರ ನಂತರ ಆರೋಪಿ ವಿ ಯು ರಡೇರಟ್ಟಿ ಇದ್ದರು. ಕೇಳಕರ ಪ್ರೌಢಶಾಲೆ ಆಡಳಿತ ಮಂಡಳಿಗೂ ಮತ್ತು ಆರೋಪಿಗೂ ಸಂಬಂಧ ಚೆನ್ನಾಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ14 ರಿಂದ ನಿಪಿ18 ಪುಸ್ತಕ ಮತ್ತು ಪೈಲಗಳನ್ನು ಯಾರ ಕಡೆಯಿಂದ ತಂದಿರುತ್ತಾರೆಂದು ಪರುಶೆಟ್ಟಿಯವರನ್ನು ಕೇಳಿರಿ ಎಂದರೆ ಸಾಕ್ಷಿಯು ನಾನು ಕೇಳಿಲ್ಲ ಎಂದು ನುಡಿಯುತ್ತಾರೆ. ನಾನು ಮಹಾಜರಗೆಂದು ಸಹಿ ಮಾಡುವ ಸಮಯದಲ್ಲಿ ಎಲ್ಲಿಂದ ತಂದಿರಿ ಎಂದು ನಾನು ಕೇಳಿಲ್ಲ. ಪಂಚನಾಮೆಯನ್ನು ಯಾವ ದಿನ ಮಾಡಿರುತ್ತಾರೆಂದು ದಿನಾಂಕ ನನಗೆ ಈಗ ನೆನಪಿಲ್ಲ. ಪಂಚನಾಮೆಯಲ್ಲಿನ ವಿಷಯ ನಾನು ಓದಿ ನೋಡಿಲ್ಲ. ಪೊಲೀಸರು ಸಹಿ ಮಾಡು ಅಂದಿಂದಕ್ಕೆ ನಾನು ಮಾಡಿರುತ್ತೇನೆಂದರೆ ಸರಿ. ಆಡಿಟ್ ರಿಪೋರ್ಟ ಆಗಿ 15 ತಿಂಗಳ ನಂತರ ಪುಸ್ತಕಗಳನ್ನು ಜಪ್ತು ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಪುಸ್ತಕಗಳೆಲ್ಲ ಪರುಶೆಟ್ಟಿಯವರ ಹತ್ತಿರ ಇದ್ದವು ಎಂದರೆ ಸರಿ. ಪರುಶೆಟ್ಟಿಯವರು ಕೇಳಕರ ಸಂಸ್ಥೆಯ ಆಡಳಿತ ಮಂಡಳಿಯ ಮಾತು ಕೇಳಿ ಸುಳ್ಳು ಲೆಕ್ಕ ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಈ ಕೇಸಿನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಆಡಳಿತ ಮಂಡಳಿಯ ಮಾತು ಕೇಳಿ ನಾನು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ನ್ಯಾ. ದಂ. ಪ್ರ. ವರ್ಗ ಮೂಡಲಗಿ.